# ಪಿ.ಎಂ.ಶ್ರೀ. ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ

ಹಳೇಮಾರ್ಟಳ್ಳಿ , ಹನೂರು ತಾಲ್ಲೂಕು , ಚಾಮರಾಜನಗರ ಜಿಲ್ಲೆ.




**ಮುಖ್ಯ ಶಿಕ್ಷಕರು : ಶ್ರೀ ಮಾದೇಶ್ ಕೆ ,**

**ಪ್ರಭಾರ ಮುಖ್ಯಶಿಕ್ಷಕರು**

**ಮೊಬೈಲ್ ಸಂಖ್ಯೆ : 9741535451**

**ಇ–ಮೇಲ್ ವಿಳಾಸ : hmghpshalemartalli@gmail.com**

# ಶಾಲಾ ಮಾಹಿತಿ

ಶಾಲೆಯ ಹೆಸರು : ಪಿ ಎಂ ಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಳೇಮಾರ್ಟಳ್ಳಿ

ಶಾಲೆಯ ವಿಳಾಸ : ಪಿ ಎಂ ಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಳೇಮಾರ್ಟಳ್ಳಿ

ಮಾರ್ಟಳ್ಳಿ ಕ್ಲಸ್ಟರ್,

ಹನೂರು ತಾಲ್ಲೂಕು

ಚಾಮರಾಜನಗರ ಜಿಲ್ಲೆ.

ಮುಖ್ಯ ಶಿಕ್ಷಕರ ಹೆಸರು : ಶ್ರೀ ಮಾದೇಶ್ ಕೆ (ಪ್ರಭಾರ ಮುಖ್ಯಶಿಕ್ಷಕರು)

ಮೊಬೈಲ್ ಸಂಖ್ಯೆ : **9741535451**

ಇ-ಮೇಲ್ ವಿಳಾಸ : hmghpshalemartalli@gmail.com

ಶಾಲೆ ಪ್ರಾರಂಭವಾದ ವರ್ಷ : 1962 ರಲ್ಲಿ ಕಿರಿಯ ಪ್ರಾಥಮಿಕ ಶಾಲೆಯಾಗಿ ಪ್ರಾರಂಭವಾಯಿತು

1997 ರಲ್ಲಿ ಹಿರಿಯ ಪ್ರಾಥಮಿಕ ಶಾಲೆಯಾಗಿ ಮಾರ್ಪಾಡುಗೊಂಡಿತು

ಆಂಗ್ಲ ಮಾಧ್ಯಮ ಪ್ರಾರಂಭವಾದ ವರ್ಷ : 2021–22 ನೇ ಸಾಲಿನಲ್ಲಿ ಪ್ರಾಂಭವಾಗಿ ಈಗ 4ನೇ ತರಗತಿಯ ವರಗೆ ಮುಂದುವರೆದಿದೆ.

ಪೂರ್ವ ಪ್ರಾಥಮಿಕ ಆರಂಭವಾದ ವರ್ಷ : 2023–24

ಶಾಲೆಯಲ್ಲಿ ಮಂಜೂರಾದ ಹುದ್ದೆಗಳು : 12

ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು : 10

ಅತಿಥಿ ಶಿಕ್ಷಕರು : 02

ಶಾಲೆಯಲ್ಲಿ ಲಭ್ಯವಿರುವ ಕೊಠಡಿಗಳು : 14 ಕೊಠಡಿಗಳಿದ್ದು ಎಲ್ಲವು ಸುಸ್ಥಿಯಲ್ಲಿವೆ.

ಹಳೇಮಾರ್ಟಳ್ಳಿ ಇದು ಕರ್ನಾಟಕದ ಗಡಿ ಜಿಲ್ಲೆಯಾದ ಚಾಮರಾಜನಗರದ ಹನೂರು ತಾಲ್ಲೂಕಿನ ಕಾಡಂಚಿನ ಗ್ರಾಮವಾಗಿದ್ದು , ಬಹುತೇಕ ತಮಿಳು ಭಾಷಿಗರೇ ಹೆಚ್ಚಾಗಿ ವಾಸಿಸುತ್ತಿದ್ದು, ಬಹುತೇಕ ಹಿಂದುಳಿದ ವರ್ಗದವರೇ ಹೆಚ್ಚಾಹಿರುವ ಈ ಪ್ರದೇಶದಲ್ಲಿ, ಅಲ್ಪಸಂಖ್ಯಾತರು (ಕ್ರಿಶ್ಚಿಯನ್) ಹೆಚ್ಚಾಗಿ ವಾಸಿಸುತ್ತಿದ್ದಾರೆ. 1962ರಲ್ಲಿ ಸರ್ಕಾರಿ ಕನ್ನಡ ಮಾಧ್ಯಮ ಶಾಲೆ ಊರಿನ ಅಂಗನವಾಡಿ ಕೇಂದ್ರದ ಕಟ್ಟಡವೊಂದರಲ್ಲಿ ಪ್ರಾರಂಭಗೊಂಡು , 1968 ರಲ್ಲಿ ಸ್ವಂತ ಕಟ್ಟಡಕ್ಕೆ ಸ್ಥಳಾಂತರಗೊಂಡಾಗ ಮಕ್ಕಳ ಸಂಖ್ಯೆ ಇದ್ದದ್ದು ಬರೇ 20 ಮಾತ್ರ ! ಸ್ಥಳೀಯರ ಇಚ್ಛಾಸಕ್ತಿ , ಮುಖ್ಯಶಿಕ್ಷಕರ , ಸಹ ಶಿಕ್ಷಕರ ಮತ್ತು ಇಲಾಖಾಧಿಕಾರಿಗಳ ಕಾರ್ಯವೈಖರಿಯಿಂದ ಹಂತ–ಹಂತವಾಗಿ ಉನ್ನತೀಕರಣಗೊಂಡು ಪ್ರಸ್ತುತ ಎಲ್.ಕೆ.ಜಿ ಯಿಂದ 8ನೇ ತರಗತಿಯವರೆಗೆ 276 ಮಕ್ಕಳು ಕಲಿಯುತ್ತಿದ್ದಾರೆ.

ಶಾಲೆಯ ಭೌತಿಕ ಪರಿಸರ ಉತ್ತಮವಾಗಿದ್ದು , ಶೈಕ್ಷಣಿಕ ಪರಿಸರ ಸಹ ಉತ್ತಮ ಪ್ರಗತಿಯಲ್ಲಿದೆ. ಶಾಲಾ ಮಕ್ಕಳು ಕಳೆದ ಏಳು ವರ್ಷಗಳಿಂದ ಸತತವಾಗಿ 14ವರ್ಷದೊಳಗಿನ ಮಕ್ಕಳ 'ಥ್ರೋಬಾಲ್' ಪಂದ್ಯಾಟದಲ್ಲಿ ಗಂಡು ಮತ್ತು ಹೆಣ್ಣುಮಕ್ಕಳ ವಿಭಾಗಗಳಲ್ಲಿ ಜಿಲ್ಲಾ ಮಟ್ಟವನ್ನು ಆಡುತ್ತಿದ್ದು , ಪ್ರಸಕ್ತ ವರ್ಷದಲ್ಲಿ ವಿಭಾಗ ಮಟ್ಟಕ್ಕೂ ಆಯ್ಕೆಯಾಗಿದ್ದರು. ಇದು ನಮ್ಮ ಶಾಲಾ ಮಕ್ಕಳ ಸರ್ವಾಂಗೀಣ ಕಲಿಕಾಸಕ್ತಿಯನ್ನು ಬಿಂಬಿಸುತ್ತದೆ.

ಪ್ರಭಾರ ಮುಖ್ಯಶಿಕ್ಷಕರನ್ನೊಳಗೊಂಡಂತೆ 10 ಶಿಕ್ಷಕ/ಕಿಯರು ಹಾಗೂ ಅತಿಥಿ ಶಿಕ್ಷಕರೂ ಸಹ ಕರ್ತವ್ಯ ನಿರ್ವಹಿಸುತ್ತಿದ್ದು , 2023–24ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಪ್ರಥಮ ಹಂತದಲ್ಲೇ ಪಿ.ಎಂ.ಶ್ರೀ. ಯೋಜನೆಗೆ ಆಯ್ಕೆಗೊಂಡು ಹಲವಾರು ಭೌತಿಕ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಪಡೆದುಕೊಂಡಿದೆ.

## ಪ್ರಸ್ತುತ ಶಾಲೆಯ ಒಂದು ನೋಟ








ಪ್ರಾರಂಭದಲ್ಲಿ ಸ್ವಂತ ಶಾಲಾ ಕಟ್ಟಡ

## ಶಾಲಾ ಮಕ್ಕಳ ಕಲಿಕಾ ಪ್ರಗತಿ

ಪಿ.ಎಂ.ಶ್ರೀ. ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ , ಹಳೇಮಾರ್ಟಳ್ಳಿ ಇಲ್ಲಿ ಎಲ್.ಕೆ.ಜಿ. ಯಿಂದ 8ನೇ ತರಗತಿಯ ವರೆಗೆ ಕಲಿಯುತ್ತಿರುವ ಮಕ್ಕಳ ಕಲಿಕಾಮಟ್ಟವು ಉತ್ತಮವಾಗಿದ್ದು, ಆರಂಭದಲ್ಲಿ ಕನ್ನಡ ಮಾಧ್ಯಮದಲ್ಲಿ ಹೆಚ್ಚೆಚ್ಚು ದಾಖಲಾಗುತ್ತಿದ್ದ ಮಕ್ಕಳು , ಕೆಲ ವರ್ಷಗಳ ಹಿಂದೆ ಇಲಾಖಾ ಆದೇಶದನ್ವಯ ಪ್ರಾರಂಭವಾದ ಆಂಗ್ಲ ಮಾಧ್ಯಮ ವಿಭಾಗಕ್ಕೆ ಇಲ್ಲಿನ ಪೋಷಕರು ಆಸಕ್ತಿಯನ್ನ ವಹಿಸಿದ್ದು ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮಕ್ಕೆ ದಾಖಲಿಸುತ್ತಿದ್ದಾರೆ. ನಮ್ಮ ಶಾಲೆಗೆ ಸಮೀಪದ ತಮಿಳು ಮಾಧ್ಯಮ ಶಾಲೆಗಳಿಂದ ಹಾಗೂ ದೊಡ್ಡಣೆ, ತೋಕೆರೆಗಳಂಥ ಬೆಟ್ಟ-ಗುಡ್ಡಗಾಡು ಪ್ರದೇಶಗಳ ಶಾಲೆಗಳಿಂದ ದಾಖಲಾಗುವ ಮಕ್ಕಳು ಬುನಾಧಿ ಹಂತದ ಕಲಿಕಾ ಜ್ಞಾನ ಅತ್ಯಂತ ಕಡಿಮೆ ಇದ್ದು, ಈ ಮಕ್ಕಳ ಕಲಿಕಾ ಪ್ರಕ್ರಿಯೆ ನಮ್ಮ ಶಾಲಾ ಶಿಕ್ಷಕರಿಗೆ ಸವಾಲೇ ಸರಿ ! ಆದಾಗ್ಯೂ ಈ ಮಕ್ಕಳ ಕಲಿಕಾ ಉನ್ನತೀಕರಣಕ್ಕೆ ಹಲವಾರು ಯೋಜನೆಗಳನ್ನು ರೂಪಿಸಿ ಕಲಿಸಲಾಗುತ್ತಿದೆ. ಪ್ರಾರಂಭದಲ್ಲಿ ಮಕ್ಕಳ ಬುನಾಧ ಸಾಮರ್ಥ್ಯವನ್ನು ಪರೀಕ್ಷಿಸಿ, ಪೋಷಕರ ಸಭೆ ನಡೆಸಿ ಮಕ್ಕಳ ಕಲಿಕಾಮಟ್ಟವನ್ನು ತಿಳಿಸಿ , ಕ್ರಿಯಾಯೋಜನೆಯನ್ನು ತಯಾರಿಸಿ ಬೋಧನಾ ಪ್ರಕ್ರಿಯೆ ನಡೆಸಲಾಗುತ್ತದೆ. ಈ ಹಂತದಲ್ಲಿ ವೈಯುಕ್ತಿಕ ಕಲಿಕೆ , ಗುಂಪು ಕಲಿಕೆ , ಸಹಪಾಟಿಯೊಡನೆ ಕಲಿಕೆಯಂಥ ಕಾರ್ಯಕ್ರಮಗಳನ್ನು ರೂಪಿಸಿ ಮಕ್ಕಳ ಕಲಿಕಾ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ. ಇದರೊಂದಿಗೆ, ಶಾಲೆಯಲ್ಲಿರುವ ಕಲಿಕೋಪಕರಣಗಳನ್ನು ಬಳಸಿಕೊಂಡು ಕಲಿಕಾಸಕ್ತಿಯನ್ನು ಹೆಚ್ಚಿಸುವ ಪ್ರಯತ್ನ ಮಾಡಲಾಗುತ್ತದೆ. ಸ್ಮಾರ್ಟ್ ದೃಶ್ಯೋಪಕರಣಗಳನ್ನು ಬಳಕೆಮಾಡಿಕೊಂಡು ಮಕ್ಕಳ ಕಲಿಕಾ ಪ್ರಕ್ರಿಯೆಯನ್ನ ಉತ್ತಮೀಕರಣಗೋಳಿಸಲಾಗುತ್ತಿದೆ.

# ಶಾಲೆಯ ಭೌತಿಕ ಪರಿಸರ

ಶಾಲಾ ಪರಿಸರ : ಹಸಿರು ಪರಿಸರವನ್ನೊಳಗೊಂಡ ಶಾಲಾವರಣ

ಶಾಲಾ ಕಟ್ಟಡ : ಮಳೆ ನೀರು ಕೊಯ್ಲನ್ನು ಒಳಗೊಂಡ ಉತ್ತಮ ಶಾಲಾ ಕಟ್ಟಡ

ತರಗತಿ ಕೋಣೆ : ವಿಶಾಲ ಸ್ಥಳಾವಕಾಶ , ಗಾಳಿ , ಬೆಳಕಿರುವ ತರಗತಿ ಕೋಣೆಗಳು

ಆಟದ ಮೈದಾನ : ಶಾಲಾವರಣಕ್ಕೆ ಹೊಂದಿಕೊಂಡಂತಿರುವ ವಿಶಾಲ ಶಾಲಾ ಮೈದಾನವಿದೆ

ಕುಡಿಯುವ ನೀರಿನ ವ್ಯವಸ್ಥೆ : ಪ್ರತ್ಯೇಕ ಬೋರ್‌ವೆಲ್ ವ್ಯವಸ್ಥೆ ಹೊಂದಿರುವ ಶಾಲೆಯಲ್ಲಿ ದಿನದ 24 ಗಂಟೆಗಳೂ ಕುಡಿಯುವ ಶುದ್ಧ ನೀರು ಲಭ್ಯವಿದೆ

ಶೌಚಾಲಯಗಳು : ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇದೆ.

## ತರಗತಿ ಪ್ರಕ್ರಿಯೆಯಲ್ಲಿ ನಾವೀನ್ಯಯುತವಾಗಿ ಅಳವಡಿಸಿಕೊಂಡಿರುವ ಉಪಕ್ರಮಗಳು

**ತರಗತಿ ಕೋಣೆಗಳಲ್ಲಿ ಮಕ್ಕಳ ಕಲಿಕಾ ಪ್ರಕ್ರಿಯೆ ಉತ್ತಮಗೊಳಿಸಲು ಹಲವಾರು ಕ್ರಿಯಾತ್ಮಕ ಬೋಧನಾ ಪ್ರಕ್ರಿಯೆಗಳನ್ನು ಅಳವಡಿಕೊಳ್ಳಲಾಗಿದೆ.**

1. ಸಹಯೋಗ ಮತ್ತು ತಂಡದ ಕಲಿಕೆ
2. ಪ್ರಾಜೆಕ್ಟ್ ಆಧಾರಿತ ಕಲಿಕೆ
3. ರಸಪ್ರಶ್ನೆ ಕಾರ್ಯಕ್ರಮ
4. ಕ್ಷೇತ್ರ ಭೇಟಿ
5. ತಜ್ಞರೊಂದಿಗೆ ಚರ್ಚೆ
6. ತರಗತಿಗಳಲ್ಲಿ ಗ್ರಂಥಾಲಯ ಓದು

## *ಬುನಾದಿ ಸಾಕಷರತೆ ಮತ್ತು ಸಂಖ್ಯಾಜ್ಞಾನ ಉತ್ತಮ ಪಡಿಸುವ ಚಟುವಟಿಕೆಗಳು*

- ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ತರಗತಿಗಳನ್ನು ಹಮ್ಮಿಕೊಳ್ಳಲಾಗುತ್ತದೆ.
- ಬೋಧನಾ ಪ್ರಕ್ರಿಯೆಯಲ್ಲಿ ಒಂದು ಅವಧಿಯನ್ನು ನಿಗದಿಪಡಿಸಲಾಗಿದೆ
- ಪೋಷಕರ ಸಹಕಾರವನ್ನು ಪಡೆದುಕೊಳ್ಳಲಾಗುತ್ತದೆ
- ಅಕ್ಷರ ಫೌಂಡೇಶನ್ ರವರ ಅಭ್ಯಾಸ ಪುಸ್ತಕಗಳನ್ನು ಬಳಸಿಕೊಳ್ಳಲಾಗುತ್ತದೆ

# ಕ್ಷೇತ್ರ ಭೇಟಿಗಳು

ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆಗಳನ್ನು ಬೆಳೆಸಲು ವಿಶ್ವೇಶ್ವರಯ್ಯ ಮ್ಯೂಸಿಯಂ ನೆಹರು ತಾರಾಲಯ ಮುಂತಾದ ಸ್ಥಳಗಳಿಗೆ ಕ್ಷೇತ್ರ ಭೇಟಿ













# ಬೆಳಗಿನ ಪ್ರಾರ್ಥನಾ ಅವಧಿಯ ಚಟುವಟಿಕೆಗಳ ಅನುಷ್ಠಾನ

**DSERT ನಿರ್ದೇಶನದ ಕ್ಯಾಲೆಂಡರ್ ಆಧಾರಿತ ಚಟುವಟಿಕೆಗಳ ಅನುಷ್ಠಾನ**












# ಮಕ್ಕಳ ವೈದ್ಯಕೀಯ  ತಪಾಸಣೆಗಳು






ಪರಿಣಿತ ವೈಧಾಧಿಕಾರಿಗಳಿಂದ ಮಕ್ಕಳ ಪರೀಕ್ಷೆ

## ವಿಜ್ಞಾನ ಮತ್ತು ಗಣಿತ ಕಲಿಕೋಪಕರಣಗಳು ಮಾದರಿಗಳ ತಯಾರಿಕೆ
















ಎಸ್‌ಡಿಎಂಸಿ ಮತ್ತು ಪೋಷಕರ ಸಭೆಗಳು,ಪೋಷಕರ ತರಬೇತಿಗಳು ಮನೆಯಲ್ಲಿ ಕಲಿಕಾ ವಾತವರಣ ಉತ್ತಮಪಡಿಸುವುದು, ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಪ್ರಗತಿಗೆ ಕ್ರಮ












## ಡಿಜಿಟಲ್ ಲೈಬ್ರರಿಗಳು ಕಂಪ್ಯೂಟರ್ ಲ್ಯಾಬ್, ಭಾಷಾ ವಿಜ್ಞಾನ ಮತ್ತು ಗಣಿತ ಕಲಿಕಾ ಕಾರ್ನರ್ ಗಳ ಮುಖಾಂತರ ಮಕ್ಕಳಿಗೆ ಕಲಿಕೆ







## ಹೆಣ್ಣು ಮಕ್ಕಳ ರಕ್ಷಣೆಗೆ- ಕರಾಟೆ ತರಬೇತಿ ಮತ್ತು ಹೆಣ್ಣು ಮಕ್ಕಳ ಸಬಲೀಕರಣ





## ಪೋಷನ್ ಅಭಿಯಾನ್ / ಅಕ್ಷರ ದಾಸೋಹ ಯೋಜನೆಯಡಿಯಲ್ಲಿ ಮೊಟ್ಟೆ ಮತ್ತು ಸಿರಿಧಾನ್ಯ ಗಳನ್ನು ನೀಡಿ ಪರಿಣಾಮಕಾರಿ ಅನುಷ್ಠಾನ














# ಕ್ರೀಡಾ ತರಬೇತಿ ಜಿಲ್ಲಾ ಮತ್ತು ರಾಜ್ಯಮಟ್ಟದ ಕ್ರೀಡೆಗಳಲ್ಲಿ ಮಕ್ಕಳ ಭಾಗವಹಿಸುವಿಕೆ










# ಶಾಲೆಯ ವಿಶೇಷ ಕಲಿಕಾ ಚಟುವಟಿಕೆಗಳು



ಮೌಢ್ಯ ಮತ್ತು ವಿಜ್ಞಾನ



ರಾಷ್ಟ್ರೀಯ ಹಸಿರು ಪಡೆ – ಇಕೋ ಕ್ಲಬ್




ಪ್ರಾಜೆಕ್ಟ್ ತಯಾರಿಕೆ



ರಸ್ತೆ ಸುರಕ್ಷತಾ ಅರಿವು ಕಾರ್ಯಕ್ರಮ



ವಿಶ್ವ ಯೋಗ ದಿನಾಚರಣೆ



ರಂಗೋಲಿ ಸ್ಪರ್ಧೆ









ಜಿಲ್ಲಾ ಹಂತದ ಕ್ರೀಡಾ ಸಾಧನೆ

ನಮ್ಮ ವಿಜ್ಞಾನ ಲ್ಯಾಬ್‌ನ ಸಂಗಾತಿ



ಮಾದಕ ವಸ್ತುಗಳ ಬಗ್ಗೆ ಜಾಗೃತಿ




ಶಾಲಾ ಸಂಸತ್ತು






PAGE_06
28 Jun 2024

## ಮಾರ್ಟಳ್ಳಿ ಶಾಲಾ ಸಂಸತ್ ಚುನಾವಣೆ




**ಪ್ರತಿನಿಧಿ ವರದಿ** ಹನೂರು

ಮಕ್ಕಳಿಗೆ ಈಗಿನಿಂದಲೇ ಚುನಾವಣೆಯ ಮಹತ್ವ ತಿಳಿಸುವ ಉದ್ದೇಶದಿಂದ ಶಾಲೆಗಳಲ್ಲಿ ಚುನಾವಣೆಯ ಮೂಲಕ ಮಂತ್ರಿಗಳನ್ನು ಆಯ್ಕೆ ಮಾಡಲಾಗುತ್ತದೆ ಎಂದು ಮಾರ್ಟಳ್ಳಿ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕ ಮಾದೇಶ್ ಹೇಳಿದರು.

ತಾಲೂಕಿನ ಮಾರ್ಟಳ್ಳಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಶಾಲಾ ಸಂಸತ್ ಚುನಾವಣೆಯಲ್ಲಿ ಫಲಿತಾಂಶ ಪ್ರಕಟಣೆ ಮಾಡಿ ಮಾತನಾಡಿ, ಭವ್ಯ ಭಾರತದಲ್ಲಿ ಚುನಾವಣೆ ಯಾವ ರೀತಿಯಲ್ಲಿ ನಡೆಯುತ್ತದೆ ಅದರಲ್ಲೂ ಚುನಾವಣೆ ಆಯೋಗದ ನಿಯಮದಂತೆ ನಡೆಯುವ ವಿಧಾನವನ್ನು ಮನವರಿಕೆ ಮಾಡುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳು ಶಾಲೆಯಲ್ಲಿ ನಡೆಯುತ್ತದೆ ಎಂದರು.

**ಶಾಲಾ ಸಂಸತ್‌ಗೆ ಮಕ್ಕಳು ಆಯ್ಕೆ:** ಶಾಲಾ ಹಂತದಲ್ಲಿ ನಡೆಯುವ ಈ ಮಕ್ಕಳ ಮಂತ್ರಿ ಮಂಡಲಕ್ಕೆ ಭಾರತದ ಚುನಾವಣೆ ಆಯೋಗದ ನಿಯಮದಂತೆ ನೈಜವಾಗಿ ಹೇಗೆ ಚುನಾವಣೆ ನಡೆಯುತ್ತವೆ ಹಾಗೆಯೇ ಮಕ್ಕಳಿಗೆ ಚುನಾವಣೆ ಮಾಡುವ ಮೂಲಕ ಅರಿವು ಮೂಡಿಸಿದ್ದು, ಆ ಮುಖೇನ ಮಂತ್ರಿಗಳು ಸಹ ಆಯ್ಕೆಯಾಗಿದ್ದಾರೆ.

ಶಿಕ್ಷಕರು ಪಿಒ, ಪಿಆರ್‌ಒ, ಎಪಿಆರ್‌ಒ ಹಾಗೂ ಬಿಎಲ್‌ಒಗಳಾಗಿ ಕೆಲಸ ನಿರ್ವಹಿಸು ತ್ತಿರುವುದು ಜತೆಗೆ ಮಕ್ಕಳು ಮತ ಚಲಾವಣೆ ಮಾಡಲು ಆಧಾರ್ ಕಾರ್ಡ್ ಹಿಡಿದು ಸರದಿ ಸಾಲಿನಲ್ಲಿ ನಿಂತು ಮತ ಚಲಾವಣೆ ಮಾಡಿದರು.

ಇದೆ ಸಂದರ್ಭದಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷ ಸಲೋಮಿಯ, ಶಿಕ್ಷಕರಾದ ಅರುಳ್ ಸೆಲ್ವಿ, ಆರೋಗ್ಯಮ್ಮಾಳ್, ಚಾರ್ಲ್ಸ್, ಧನರಾಜ್, ವೈಲೇಟ್ ಮೇರಿ, ರವೀಂದ್ರ, ಸತೀಶ್, ಮೂರ್ತಿ, ಸುರಭಿ ಹಾಗೂ ಫ್ಲಾರೆನ್ಸ್ ಸೇರಿದಂತೆ ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಪೂರ್ವ ಪ್ರಾಥಮಿಕ ಶಾಲೆಯ ಚಟುವಟಿಕೆಗಳು









ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪೂರ್ವ ಪ್ರಾಥಮಿಕ ತರಗತಿ ಭೇಟಿ

ಸಂಭ್ರಮ ಶನಿವಾರದಲ್ಲಿ ಕಲಿಕೆಯ ಒಂದು ನೋಟ



ಶಾಲೆಯಲ್ಲಿ ಹಮ್ಮಿಕೊಂಡಿದ್ದ ಕಲಿಕಾ ಹಬ್ಬ

# ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಚಟುವಟಿಕೆಗಳು















## ಶಾಲಾ ಹಸಿರು ವನ ಮತ್ತು ಪರಿಸರ ಸಂರಕ್ಷಣೆ













# ಶಾಲಾಭಿವೃದ್ಧಿಯಲ್ಲಿ ಎಸ್‌ಡಿಎಂಸಿ ಮತ್ತು ದಾನಿಗಳ ಪಾತ್



ಯೂತ್ ತ್ ಫಾರ್ ಸೇವಾ ಸಂಸ್ಥೆಯಿಂದ
ಕಂಪ್ಯೂಟರ್ ಲ್ಯಾಬ್ ಕೊಡುಗೆ




ಸಮವಸ್ತ್ರ ಕೊಡುಗೆ



ಬ್ಯಾಂಡ್ ಸೆಟ್ ಕೊಡುಗೆ




LKG & UKG ಮಕ್ಕಳಿಗೆ ಶೂ ಸಾಕ್ಸ್ ಕೊಡುಗೆ



ಆಂಡ್ರ್ಯಾಯಿಡ್ ಟಿ ವಿ ಕೊಡುಗೆ



ಕಂಪ್ಯೂಟರ್ & ಪ್ರಿಂಟರ್ ಕೊಡುಗೆ